# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :** 891

**ಸದಸ್ಯರ ಹೆಸರು :** ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು)

**ಉತ್ತರಿಸುವ ದಿನಾಂಕ :** 23.02.2024

**ಉತ್ತರಿಸುವ ಸಚಿವರು :** ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕನ್ನಡ ಅಸ್ಮಿತೆ ಮತ್ತು ಸಂಸ್ಕೃತಿ ಬಿಂಬಿಸುವ 'ಬೆಳಗಾವಿ' ಎಂಬ ಪದವನ್ನು ಬೆಳಗಾವಿ ನಗರ/ ಜಿಲ್ಲೆಯಲ್ಲಿ ಸರ್ಕಾರಿ ಶಾಲಾ ಕಾಲೇಜುಗಳು ಮತ್ತು ಇನ್ನಿತರ ಕಛೇರಿಗಳಲ್ಲಿ ಬಳಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿರುವುದಿಲ್ಲ. |
| (ಆ) | ಸರ್ಕಾರದ ಎಲ್ಲಾ ಶಾಲಾ-ಕಾಲೇಜುಗಳು ಮತ್ತು ಇನ್ನಿತರ ಕಛೇರಿಗಳಲ್ಲಿ 'ಬೆಳಗಾವಿ' ಎಂದು ಬಳಸಬೇಕೆಂಬ ಜನರ ಅಭಿಲಾಷೆಯನ್ನು ಜಾರಿಗೆ ತರಲು ಸರ್ಕಾರ ಕೈಗೊಂಡ ಕ್ರಮಗಳೇನು; | ಸರ್ಕಾರದ ಅಧಿಸೂಚನೆ ಸಂಖ್ಯೆ:ಕಂಇ 03 ಟಿಎನ್ -ವಿ 2006, ದಿನಾಂಕ:31.10.2014ರನ್ವಯ ನಗರ ಮತ್ತು ಜಿಲ್ಲೆಗಳ ಹೆಸರುಗಳನ್ನು ಕನ್ನಡ ಲಿಪಿಯಲ್ಲಿ ಬದಲಾಯಿಸಿ ಆದೇಶ ಹೊರಡಿಸಿದೆ.<br><br>ಅಲ್ಲದೇ ಸರ್ಕಾರದ ಸುತ್ತೋಲೆ ಸಂಖ್ಯೆ:ಕಸಂವಾ 149 ಕೆಓಎಲ್ ಆಕ 2020 (ಭಾಗ-2), ದಿನಾಂಕ:27.11.2020ರಲ್ಲಿ ಕರ್ನಾಟಕದ ಕೆಲವು ನಗರ/ಪಟ್ಟಣಗಳ ಬದಲಾವಣೆಯಾಗಿರುವ ಹೆಸರುಗಳನ್ನೇ ಕಛೇರಿಯ ನಾಮ ಫಲಕಗಳಲ್ಲಿ, ಕಛೇರಿಯ ಪ್ರಕಟಣೆಗಳಲ್ಲಿ, ಆದೇಶಗಳಲ್ಲಿ ಹಾಗೂ ಇನ್ನಿತರ ಎಲ್ಲಾ ಕಡೆ ಕಡ್ಡಾಯವಾಗಿ ಬಳಸಲು ಸೂಚಿಸಲಾಗಿರುತ್ತದೆ. |
| ಇ) | ಖಾಸಗಿ ಕಛೇರಿಗಳು ಮತ್ತು ಅಂಗಡಿಗಳು ಕನ್ನಡ ಬಳಸದೆ ಕೇವಲ ಮರಾಠಿ ಅಥವಾ ಇಂಗ್ಲೀಷ್ ನಲ್ಲಿ ಫಲಕಗಳನ್ನು ಬಳಸುತ್ತಿರುವುದರಿಂದ ಅವುಗಳನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು? | ರಾಜ್ಯಸರ್ಕಾರದ ಭಾಷಾನೀತಿಯನ್ವಯ ಬೆಳಗಾವಿಯಲ್ಲಿರುವ ಮರಾಠಿ ನಾಮಫಲಕಗಳನ್ನು, ಭಿತ್ತಿಪತ್ರಗಳನ್ನು, ಮರಾಠಿ ಬೋರ್ಡುಗಳನ್ನು ತೆರವುಗೊಳಿಸಿ, ಕಡ್ಡಾಯವಾಗಿ ಕನ್ನಡದಲ್ಲಿಯೇ ಅಳವಡಿಸುವಂತೆ ಕನ್ನಡ ಅಭಿವೃದ್ಧಿ ಪ್ರಾಧಿಕಾರವು ದಿನಾಂಕ:20.11.2023ರಂದು ಬೆಳಗಾವಿ ಜಿಲ್ಲಾಧಿಕಾರಿಯವರಿಗೆ ಪತ್ರ ಬರೆದು ಸೂಚನೆ ನೀಡಿರುತ್ತದೆ. |

ಸಂಖ್ಯೆ.ಕಸಂವಾ 29 ಕೆಓಎಲ್ ಆಕ 2024

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು